<u>ಅಪರ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ</u>

*CC No : 655/2013*

*CW.1* *PW.6*

ಹೆಸರು ಃ ಸಾವಿತ್ರಮ್ಮ

ಗಂಡನ ಹೆಸರು ಃ ಬಿ.ಸಿ ಕೃಷ್ಣಪ್ಪ
ವಯಸ್ಸು ಃ *72* ವರ್ಷ
ಉದ್ಯೋಗ ಃ ಗೃಹಿಣಿ
ವಾಸ ಃ ಚನ್ನಪಟ್ಟಣ ಟೌನ್.

ಸಾಕ್ಷಿಯನ್ನುಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಎ.ಪಿ.ಪಿ ಯವರಿಂದ *B* ದಿಃ *03.04.2025*

ದಿಃ *06.07.2013* ರಂದು ರಾತ್ರಿ ಸುಮಾರು *9.00* ರಿಂದ *9.30* ಗಂಟೆ ಸಮಯದಲ್ಲಿ ನಾನು ಹಾಲು ತರಲು ಮಹಾಲಕ್ಷ್ಮಿ ಬಡಾವಣೆಯಲ್ಲಿರುವ ರಾಜು ರವರ ಅಂಗಡಿಗೆ ಹಾಲು ತರಲು ಹೋಗಿದ್ದೆ. ಅಂಗಡಿ ಬಳಿ ಇಬ್ಬರು ವ್ಯಕ್ತಿಗಳು ಸಿಗರೇಟ್ ಸೇದುತ್ತಾ ನಿಂತಿದ್ದರು. ನಾನು ಹಾಲು ತೆಗೆದುಕೊಂಡು ವಾಪಸ್ಸು ಬರುವಾಗ ಒಬ್ಬ ವ್ಯಕ್ತಿ ಲೈಟ್ ಕಂಬದ ಬಳಿ ನಿಂತಿದ್ದ, ಮತ್ತೊಬ್ಬ ನನ್ನ ಹಿಂದೇನೆ ಬಂದ. ನಾನು ಯಾರೋ ಬರುತ್ತಿದ್ದಾರೆ ಎಂದು ದಾರಿ ಬಿಟ್ಟರೂ ನನ್ನ ಹಿಂದೆಯೇ ಬಂದು ನನ್ನ ಕತ್ತಿನಲ್ಲಿ ಇದ್ದ ಸರವನ್ನು ಕೈಯಲ್ಲಿ ಹಿಡಿದುಕೊಂಡು ಕಿತ್ತುಕೊಳ್ಳಲು ಪ್ರಯತ್ನಿಸಿದ. ಆಗ ನಾನು ಕಿರುಚಿಕೊಂಡು ಜೋರಾಗಿ ಕೂಗಿದೆ. ಯಾರುರ ಬರಲಿಲ್ಲ. ನಾನು ಆತನ ಕೈಯನ್ನು ಜೋರಾಗಿ ಕಚ್ಚಿದೆ. ಒಂದು ಕೈಯಲ್ಲಿ ನನ್ನ ಮಾಂಗಲ್ಯ ಸರವನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದೆ. ಅವನು ಜೋರಾಗಿ ಕಿತ್ತುಕೊಂಡಾಗ ನನ್ನ ಮಾಂಗಲ್ಯ ಸರದ *15* ಗ್ರಾಂ ನಷ್ಟು ಸರವನ್ನು ಕಿತ್ತುಕೊಂಡು, ನನ್ನನ್ನು ತಳ್ಳಿ ಓಡಿ ಹೋಗಿ ಕಂಬದ ಬಳಿ ನಿಂತಿದ್ದ ವ್ಯಕ್ತಿಯ ಗಾಡಿಯಲ್ಲಿ ಓಡಿ ಹೋದರು. ನಾನು ಕೆಳಗೆ ಬಿದ್ದಾಗ ಪ್ರಾಸಾ *1* ಮತ್ತು ಸತೀಶ್

ಬಾಬು ಎನ್ನುವವರು ಸ್ಥಳಕ್ಕೆ ಬಂದು, ಏನಾಯಿತು ಆಂಟಿ ಎಂದು ಕೇಳಿದರು. ಆಗ ನಾನು ನಡೆದ ಘಟನೆ ಬಗ್ಗೆ ಹೇಳಿದಾ, ಅವರು ನನ್ನನ್ನು ಮೇಲಕ್ಕೆತ್ತಿ ದೂರು ದಾಖಲಿಸುವಂತೆ ಹೇಳಿ ಹೊರಟು ಹೋದರು. ನಾನು ಮನೆಗೆ ಹೋಗಿ ನನ್ನ ಮನೆಯವರಿಗೆ ವಿಚಾರ ವನ್ನು ತಿಳಿಸಿ ಮರುದಿನ ಚನಪಟ್ಟಣ ಪೂರ್ವ ಪೋಲೀಸ್ ಠಾಣೆಗೆ ಹೋಗಿ ದೂರು ನೀಡಿದೆವು. ಸದರಿ ದೂರನ್ನು ಈಗಾಗಲೇ ನಿ ಪಿ *2* ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನು **ನಿಪಿ.*2* *(ಬಿ)* ಎಂದು ಗುರುತಿಸಲಾಯಿತು.** ಈ ಹಂತದಲ್ಲಿ ಸಾಕಿವ್ವಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಅದು ಮಹಜರಾಗಿದ್ದು, **ಸಾಕ್ಷಿಯ ಸಹಿಯನ್ನು ನಿ ಪಿ *1* ಸಿ ಎಂದು ಗುರುತಿಸಲಾಯಿತು.** ನಿಪಿ *1* ರಲ್ಲಿ ಏನು ಬರೆದಿದೆ ಎಂದು ಗೊತ್ತಿದೆ. ನಾನು ಪೊಲೀಸರ ಮುಂದೆ ಘಟನೆಯ ಸಂಬಂಧವಾಗಿ ಹೇಳಿಕೆಯನ್ನು ನೀಡಿರುತ್ತೇನೆ.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಹಾಜರಿರುವ *2* ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ತೀರ್ಮಾನಿಸಿ ಅಭಿಯೋಜಕರ ಕೋರಿಕೆಯ ಮೇರೆಗೆ ಪಾಟೀ ಸವಾಲುಗೆ ಅನುಮತಿಸಲಾಯಿತು. ಪಾಟೀ ಸವಾಲುಃ ಎ.ಪಿ.ಪಿ. ಯವರಿಂದಃ-**

ಇಬ್ಬರೂ ವ್ಯಕ್ತಿಗಳು ಮೋಟಾರ್ ಸೈಕಲ್ ನಲ್ಲಿ ಬಂದು, ಒಬ್ಬ ವ್ಯಕ್ತಿ ಮೋಟಾರ್ ಸೈಕಲ್ ಮೇಲೆ ಕುಳಿತುಕೊಂಡು, ಇನ್ನೊಬ್ಬ ವ್ಯಕ್ತಿ ಏಕಾಏಕಿ ಬಂದು ನನ್ನ ಕತ್ತಿನಲ್ಲಿದ್ದ ಚಿನ್ನದ ಮಾಂಗಲ್ಯ ಸರವನ್ನು ಕಿತ್ತುಕೊಂಡರು ಎಂದರೆ ಸರಿ. ನನ್ನ ಮಾಂಗಲ್ಯ ಸರದಲ್ಲಿ ಅರ್ಧದಷ್ಟು ಸರವನ್ನು ಕಿತ್ತುಕೊಂಡಿದ್ದು, ಅದು ಸುಮಾರು *12* ಗ್ರಾಂ ನಷ್ಟು ತೂಕವಿದ್ದು ಅದರ ಬೆಲೆ ರೂ.*18* ಸಾವಿರ ಆಗಿರುತ್ತದೆ ಎಂದರೆ ಸರಿ. ಘಟನೆ ಆದ ತಕ್ಷಣ ನಾನು ಕಿರುಚಿಕೊಂಡಾಗ ಅಕ್ಕಪಕ್ಕದ ಜನರು ಬಂದು ನನ್ನನ್ನು

ಉಪಚರಿಸಿ ಮನೆಗೆ ಕಳುಹಿಸಿಕೊಟ್ಟರು ಎಂದರೆ ಸರಿ. ಆ ದಿನ ತಡರಾತ್ರಿ ಆದ ಕಾರಣ ಮರುದಿನ ಪೋಲೀಸ್ ಠಣೆಗೆ ಹೋಗಿ ದೂರು ದಾಖಲು ಮಾಡಲಾಯಿತು. ದಿಃ *07.07.2013* ರಂದು ಬೆಳಿಗ್ಗೆ *11.20* ರಿಂದ *11.50* ರ ಸಮಯದಲ್ಲಿ ಮಹಾಲಕ್ಷ್ಮಿ ಬಡಾವಣೆ, *2* ನೇ ಕ್ರಾಸ್ ತಿರುವಿನಲ್ಲಿ ಪೂರ್ಣ ಶ್ರೀ ಡಿಜಿಟಲ್ ಪೋಟೋ ಸ್ಟುಡಿಯೋ ಅಂಗಡಿ ಮುಂಭಾಗ ನಾನು ತೋರಿಸಿದ ಸ್ಥಳದಲ್ಲಿ ನನ್ನ ಹಾಗೂ ಫ್ರಾಸಾ *1* ಮತ್ತು ಸತೀಶ್ ಬಾಬುರವರ ಸಮಕ್ಷಮನಿ ಪಿ *1* ರಂತೆ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿ. ಪೋಲೀಸರನ್ನು ನನ್ನನ್ನು ಠಾಣೆಗೆ ಕರೆದು ಆರೋಪಿತರನ್ನು ಗುರುತಿಸುವಂತೆ ಕೇಳಿದಾಗ ನಾನು ಆರೋಪಿತರನ್ನು ಗುರುತಿಸುತ್ತೇನೆ. ಆಗ ಆರೋಪಿತರು ಅವರ ಹೆಸರುಗಳು ಹರ್ಷದ್ ಖಾನ್ ಮತ್ತು ಆಜಮ್ ಖಾನ್ ಎಂದು ತಿಳಿಸಿರುತ್ತಾರೆ ಎಂದರೆ ಸರಿ. *1* ನೇ ಆರೋಪಿ ಹರ್ಷದ್ ಖಾನ್ ಸರವನ್ನು ಕಿತ್ತುಕೊಂಡಿದ್ದು ಎಂದರೆ ಸರಿ. ಸಾಕ್ಷಿ ಮುಂದುವರಿದು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯೇ ಆ ದಿನ ನನ್ನ ಸರವನ್ನು ಕಸಿದುಕೊಂಡಿರುವುದು ಎಂದು ನುಡಿಯುತ್ತಾರೆ. ಮತ್ತೊಬ್ಬ ಆರೋಪಿ ಮೋಟರ್ ಸೈಕಲ್ ನ ಮೇಲೆ ಕುಳಿತುಕೊಂಡಿದ್ದರು ಎಂದರೆ ಸರಿ. ಆರೋಪಿತರು ಕಿತ್ತುಕೊಂಡಿದ್ದ ನನ್ನ ಸರವನ್ನು ಗುರುತಿಸಲು ಪೋಲೀಸರು ಠಾಣೆಯಲ್ಲಿ ತಿಳಿಸಿದ್ದರು, ಆಗ ನನ್ನ ಕತ್ತಿನಲ್ಲಿದ್ದ ನನ್ನ ಸರಕ್ಕೆ ಹೋಲಿಕೆ ಮಾಡಿ ನೋಡಿ, ತುಂಡಾಗಿರುವ ಸರ ನನ್ನದೇ ಎಂದು ತಿಳಿದು ಬಂತು ಎಂದರೆ ಸರಿ.

ಆರೋಪಿತರು ಓಡಿಸುತ್ತಿದ್ದ ಮೋಟಾರ್ ಸೈಕಲ್ ಸುಜುಕಿ ಕಂಪನಿಯಾದ್ದಾಗಿದ್ದು ಅದರ ಸಂಖ್ಯೆ ಕೆ ಎ - *02* ಇಜೆ - *8364* ಎಂದರೆ ಸರಿಯಾಗಿ ನೆನಪಿಲ್ಲ, ಆದರೆ ಸುಜುಕಿ ಎಂದು ಮಾತ್ರ ನೆನಪಿದೆ ಎಂದು ನುಡಿಯುತ್ತಾರೆ. ನಿಮ್ಮ ಕತ್ತಿನಲ್ಲಿದ್ದ ಸರವನ್ನು *1* ನೇ ಆರೋಪಿಯೇ ಕಿತ್ತುಕೊಂಡಿರುವುದು ಎಂದರೆ ಸರಿ. ನಿಪಿ*6* ರಲ್ಲಿ ಆರೋಪಿತರು ಆ ದಿನ

ಕಿತ್ತುಕೊಂಡು ಹೋದ ಸರ  ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎಸ್ ವೈ ಎಸ್ ವಕೀಲರಿಂದ</u>**

1. ಮಾಂಗಲ್ಯದ ಸರದ ರಶೀದಿಯನ್ನು ದೂರು ನೀಡುವ ಸಮಯದಲ್ಲಿ ಪೊಲೀಸರಿಗೆ ನೀಡಲಾಯಿತೇ ಎಂದರೆ ಇಲ್ಲ. ಘಟನೆ ನಡೆಯಿತು ಎನ್ನುವ ಸ್ಥಳಕ್ಕೂ ನಮ್ಮ ಮನೆಗೂ ಎಷ್ಟು ದೂರವಿತ್ತು ಇತ್ತು ಎಂದರೆ ಸಾಕ್ಷಿ 10  ರಿಂದ  15 ಹೆಜ್ಜೆ ದೂರವಿತ್ತು ಎಂದು ನುಡಿಯುತ್ತಾರೆ. ಘಟನೆಯ ಸ್ಥಳದಲಿಲ ನಿಮ್ಮ ಮಗನಿಗೆ ಸೇರಿದ ಸುಟ್ಟಡಿಯೋ ಇತ್ತು ಎಂದರೆ ಸಾಕ್ಷಿ ಸ್ಟುಡಿಯೇ ಮುಚ್ಚಿತ್ತು. ಸ್ಟುಡಿಯೇ ನಡೆಸುವ ನನ್ನ ಮಗನ ಹೆಸರು ಪ್ರದೀಪ್. ನನ್ನ ಮಗನ ಸ್ಟುಡಿಯೇದಲ್ಲಿ ಕೆಲಸ ಮಾಡುವವರ ಹೆಸರು ಶಿವು /ಫ್ರಾಸಾ 3 ಎಂದರೆ ಸರಿ. ನಿಪಿ 1 ದುಾರುನೀಡುವ ಸಮಯದಲ್ಲಿ ಮಾಂಗಲ್ಯ ಸರದ ತೂಕ ಮತ್ತು ವಿನ್ಯಾಸ ನಮೂದು ಮಾಡಲಾಗಿತ್ತೇ ಎಂದರೆ ಇಲ್ಲ. ಆ ದಿನ ನನ್ನ ಮಾಂಗಲ್ಯ ಸರ ಕಿತ್ತುಕೊಂಡು ಹೋದರು ಎಂದು ಹೇಳಿದ ದಿನದಂದು ಆರೋಪಿತರು ನಿಮ್ಮ ಸರವನ್ನು ಕಿತ್ತುಕೊಂಡು ಹೋಗಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಘಟನೆ ನಡೆದ ಬಗ್ಗೆ ಮರುದಿನ ದಿನಪತ್ರಿಕೆಗಳಲ್ಲಿಯೂ ಸಹ ಬಂದಿತ್ತು ಎಂದು ನುಡಿಯುತ್ತಾರೆ. ಸದರಿ ಪ್ರಕಟಣೆಯನ್ನು  ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ನನ್ನ ಮಾಂಗಲ್ಯದ ಸರವನ್ನು ಬೇರೆ ಕಡೆ ಕಳೆದುಕೊಂಡು ಈ ಬಗ್ಗೆ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಪೊಲೀಸರೆ ನನ್ನ ಸರವನ್ನು ವಾಪಸ್ ನನಗೆ ಕೊಡಿಸಿದರು ಎಂದು ನುಡಿಯುತ್ತಾರೆ. ನನ್ನ ಬಳಿ ಉಳಿಕೆ ಇದ್ದ ಸರ 40 ಗ್ರಾಂ ತೂಕವಿದ್ದು, ಆರೋಪಿ ಕಿತ್ತುಕೊಂಡಿದ್ದ ಸರದ ತುಂಡು ಸುಮಾರು 15 – 20 ಗ್ರಾಂ ಇತ್ತು. ಪೋಲೀಸ್ ಠಾಣೆಗೆ  ಒಂದು ಸಹಿಯನ್ನು

ಮಾಡಿರುತ್ತೇನೆ. ಪೋಲೀಸ್ ಠಾಣೆಗೆ ನಾನು 2 ಬಾರಿ ಹೋಗಿದ್ದು, ಮೊದಲನೆ ಬಾರಿ ದೂರು ನೀಡಲು ಹೋಗಿದ್ದೆ ಆಗ 1 ಸಹಿ ಮಾಡಿದ್ದೆ, ನಂತರ ಆರೋಪಿತರನ್ನು ಗುರುತಿಸುವ ಸಲುವಾಗಿ ನನ್ನನ್ನು ಪೋಲೀಸ್ ಠಾಣೆಗೆ ಕರೆಸಿದ್ದು ಆ ಸಮಯದಲ್ಲಿ 1 ಸಹಿಯನ್ನು ಮಾಡಿರುತ್ತೇನೆ. ಈ ಬಗ್ಗೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ಮಹಜರಿನಲ್ಲಿ ಏನು ಬರೆದಿದೆ ಎಂದು ತಿಳಿದುಕೊಂಡಿಲ್ಲ. ನಿಪಿ 1 ಕ್ಕೆ ಯಾರು ಯಾರು ಸಹಿ ಮಾಡಿದರು ಎಂದರೆ ಸಾಕ್ಷಿ ನನಗೆ ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಪಿ 1 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುವುದು. ನಾನು ಬೇರೆ ಕಡೆ ಸರವನ್ನು ಕಳೆದುಕೊಂಡು ಆರೋಪಿತರ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರಾದ ಫ್ರಾಸಾ 1 ಮತ್ತು 3, ಚಾಸಾ 3 ಮತ್ತು 4 ರವರ ನಮ್ಮ ಸಂಬಂಧಿಕರಲ್ಲ. ನಿಪಿ 6 ರಲ್ಲಿ ಕಾಣುವ ಸರ ಕರಿಮಣಿ ಸರ ಅಲ್ಲ ಎಂದರೆ ಸಕ್ಷಿ ಅದು ಸಂಪುರ್ಣವಾಗಿ ಕರಿಮಣಿ ಸರ ಅಲ್ಲ, ಮಧ್ಯೆ ಮಧ್ಯೆ ಕರಿಮಣಿ ಇದೆ ಎಂದು ನುಡಿಯುತ್ತಾರೆ. 4 ಕರಿಮಣಿಗಳು ಇದರಲ್ಲಿ ಕಾಣುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ಸರದಲ್ಲಿ ಕರಿಮಣಿಗಳು ಇದ್ದು, ಈಗ ನಾನು ನೋಡುತ್ತಿರುವ ಸರ ಸಾದಾ ಇದೆ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇಲ್ಲ.**

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)*

ಓ.ಹೇ.ಕೇ.ಸ.ಓ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.